**ಸಾಕ್ಷಿಯನ್ನು ದಿನಾಂಕಃ 12-09-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ 2 ಮತ್ತು 4 ನೇ ಪ್ರತಿವಾದಿಪರ ಶ್ರೀ. ಟಿ.ಅರ್.ಎ ವಕೀಲರವರಿಂದಃ**

ನಾನು ಪಿಯುಸಿ ಕಲಿತಿದ್ದು ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನ್ನ ಸಂಪೂರ್ಣ ಹೆಸರು ಉತ್ತಂಗಿ ಚೆನ್ನನಗೌಡ. ಸಾಕ್ಷಿ ಪ್ರಮಾಣ ಪತ್ರದಲ್ಲ ನನ್ನ ಹೆಸರನ್ನು ಏನೆಂದು ಬರೆಸಿದ್ದೆನೆ ನನಗೆ ಗೊತ್ತಿಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗು ನನಗೆ ಗೊತ್ತಿವೆ. ಅದನ್ನು ತಯಾರಿಸಲು ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿದ್ದೆನೆ. ಶ್ರೀ ರಾಮನಗೌಡ ವಕೀಲರ ಕಚೇರಿಯಲ್ಲಿ ಪ್ರಮಾಣ ಪತ್ರವನ್ನು ನೋಟರಿ ಮಾಡಿಸಿದ್ದೇನೆ.

ನನಗೆ ಶಾವಮ್ಮಳ ಕುಟುಂಬದವರು ಕಳೆದ 25-30 ವರ್ಷಗಳಿಂದ ಗೊತ್ತಿರುವರು. ನಾನು ಆಕೆಯ ಕುಟುಂಬದವರ ಸಂಬಂದಿಕನಾಗಿರುವುದಿಲ್ಲ ಅಂದರೆ ಸರಿ. ನಮ್ಮ ಮನೆತನದ ವ್ಯವಹಾರಗಳು ಮತ್ತು ಅವರ ಮನೆಗಳ ವ್ಯವಹಾರಗಳು ಬೇರೆ ಬೇರೆ ಆಗಿದ್ದು ವ್ಯವಹಾರದ ಕುರಿತು ಮಾಹಿತಿ ಇರುತ್ತಿರಲಿಲ್ಲ ಅಂದರೆ ಸರಿಯಲ್ಲ. ನನ್ನ ಪ್ರಕಾರ ಶಾವಮ್ಮಳ ಕುಟುಂಬದ ಅರ್ಥಿಕ ಪರಿಸ್ತಿತಿ ಚೆನ್ನಾಗಿತ್ತು ಅದರೆ ಸಾಲ ಇತ್ತು. ಎಷ್ಟು ಸಾಲ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ ಅಂದರೆ ಸರಿಯಲ್ಲ.

ಸಿದ್ದಮಳು ಪ್ರಥಮವಾಗಿ ಎಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಆಕೆ ಕೆಲಸ ಮಾಡಿದ ದಿನದಿಂದ ನಂತರದ ದಿನಗಳಲ್ಲಿ ಎಲ್ಲಿ ಎಲ್ಲಿ ಕೆಲಸ ಮಾಡಿರುವರು ಎಂದು ನನಗೆ ಹೇಳಲಾಗುವುದಿಲ್ಲ. ಆಕೆ ಕಡಬಗೇರಿಯಲ್ಲಿ ವಾಸ ಇದ್ದರು ಆದರೆ ಯಾವ ವರ್ಷದಿಂದ ಯಾವ ವರ್ಷದ ವರೆಗೆ ಅಲ್ಲಿ ವಾಸಲ ಇದ್ದರು ಎಂದು ನನಗೆ ಗೊತ್ತಿಲ್ಲ ಆದರೆ ಸುಮಾರು 10 ವರ್ಷಗಳ ಕಾಲ ಅಲ್ಲಿ ವಾಸ ಇದ್ದರು.

ಇಂದಿಗೆ ಎಷ್ಟು ವರ್ಷಗಳ ಹಿಂದೆ ಅವರು ಕಡಬಗೇರಿ ಬಿಟ್ಟು ಹೋದರು ಎಂದು ನನಗೆ ಗೊತ್ತಿಲ್ಲ.

ಸಿದ್ದಮ್ಮ ಯಾವತ್ತೂ ಕಡಬಗೇರಿಯಲ್ಲಿ ಮತದಾನ ಮಾಡಿರುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ. ಸೂಬಾಷ ಚಂದ್ರನು ಯಾವ ವರ್ಷದಿಂದ ಯಾವ ವರ್ಷದ ವರೆಗೆ ದುಶ್ಚಟಕ್ಕೆ ಬಲಿಯಾಗಿದ್ದನು ಎಂದು ನನಗೆ ಹೇಳಲಾಗುವುದಿಲ್ಲ. ಆತನು ಇಸ್ಪಿಟು ಆಟ ಮತ್ತು ಕುಡಿತನ ಚಟಕ್ಕೆ ಬಲಿಯಾಗಿ ಆರ್ಥಿಕ ನಷ್ಟ ಉಂಟು ಮಾಡಿದ್ದನು. ಆತನಿಗೆ ಕುಡಿಯಲು ಮತ್ತು ಇಸ್ಪಿಟು ಅಡಲು ಹಣ ಎಲ್ಲಿಂದ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಆತನು ಯಾರಿಂದ ಯಾವಾಗ ಎಷ್ಟು ಮೊತ್ತದ ಸಾಲವನ್ನು ಪಡೆದಿದ್ದನು ಎಂದು ನನಗೆ ಮಾಹಿತಿ ಇರುವುದಿಲ್ಲ. ಹೊಲವನ್ನು ಮಾರಿ ಸಾಲವನ್ನು ತೀರಿಸಿದ ಕುರಿತು ನನಗೆ ಮಾಹಿತಿ ಇರುವುದಿಲ್ಲ ಅಂದರೆ ಸರಿ.

ಶಾವಮ್ಮ ಕಡಬಗೇರಿಯಲ್ಲಿ ವಾಸ ಇರುವರು. ಶಾವಮ್ಮ ಈಗ ದಾವಣಗೆರೆಯ ಶಾಮನೂರು ಗ್ರಾಮದಲ್ಲಿ ತನ್ನ ಮಗಳೊಂದಿಗೆ ವಾಸ ಇರುವರು ಅಂದರೆ ನನಗೆ ಗೊತ್ತಿಲ್ಲ. ಶಾವಮ್ಮಳನ್ನು ಸಿದ್ದಮ್ಮ ಯಾವತ್ತೂ ನೋಡಿಕೊಂಡಿರುವುದಿಲ್ಲ ಅಂದರೆ ಸರಿಯಲ್ಲ. ಶಾವಮ್ಮ ಮತ್ತು ಸಿದ್ದಮ್ಮ ಈಗ ಸೊಕ್ಕೆ ಗ್ರಾಮದಲ್ಲಿ ವಾಸ ಇರುವರು. ಅಲ್ಲಿ ಅವರು ವಾಸವಾಗಿರುವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಶಾವಮ್ಮ ಕಡಬಗೇರಿಗೆ ಹೋಗಿ ಬಂದು ಮಾಡುತ್ತಿರುತ್ತಾರೆ. ಸಿದ್ದಮ್ಮ ಕಡಬೇರಿಗೆ ಸೊಸೈಟಯ ಸಕ್ಕರೆ ಮತ್ತು ಅಕ್ಕಿ ಖರೀದಿ ಮಾಡಲು ಬರುವರು ಅಂದರೆಸರಿ .ಕಡಬಗೇರಿ ಸೊಸೈಟಿಯಿಂದ ಅಕ್ಕಿಯನ್ನು ಖರೀದಿ ಅವರು ಸೊಕ್ಕೆಗೆ ವಾಪಸ್ಸು ಹೋಗುವರು ಅಂದರೆ ಸರಿ, ಆದ್ದರಿಂದ ಅವರು ಕಡಬೇರಿಯಲ್ಲಿ ವಾಸ ಇರುವುದಿಲ್ಲ ಸೊಕ್ಕೆಯಲ್ಲಿ ವಾಸ ಇರುವರು ಅಂದರೆ ಸರಿ. ಸಿದ್ದಮಳ ಅತ್ತೆಯಾದ ಶಾವಮ್ಮಳು ಯಾವತ್ತೂ ಕಡಬಗೇರಿಯಲ್ಲಿ ವಾಸ ಇರಲಿಲ್ಲ ಮತ್ತು ಈಗಲೂ ಇಲ್ಲ ಹಾಗೂ ಸೊಕ್ಕೆಯಲ್ಲಿ ವಾಸ ಇರಲಿಲ್ಲ ಮತ್ತು ಈಗಲೂ ಇಲ್ಲ ಅಂದರೆ ನನಗೆ ಗೊತ್ತಿಲ್ಲ.

ಖರೀದಿ ಪತ್ರವನ್ನು ಸೃಷ್ಟಿ ಮಾಡಿದ ವಿಚಾರ ಊರಿನ ಜನರಿಂದ ಗೊತ್ತಿರುತ್ತದೆ. ನನಗೆ ಊರಿನ ಜನರ ಎಲ್ಲರ ಪರಿಚಯ ಇರುವುದಿಲ್ಲ. ನನಗೆ ಆ ವಿಚಾರವನ್ನು ತಿಳಿದ ಜನರ ಹೆಸರು ಗೊತ್ತಿಲ್ಲ. ಖರೀದಿ ಪತ್ರವನ್ನು ಯಾವಗ ಸೃಷ್ಟಿಸಿರುವರು ಎಂದು ನನಗೆ ಗೊತ್ತಿಲ್ಲ. ಸೃಷ್ಟಿಸಲಾಗಿದೆ ಎಂದು ಹೇಳಿದ ದಾಖಲೆಯನ್ನು ನಾನು ಕುದ್ದಾಗಿ ನೋಡಿರುವುದಿಲ್ಲ. 2 ನೇ ಪ್ರತಿವಾದಿ ಅಂದರೆ ಶಾವಮ್ಮಳ ಮಗಳಾದ ಶರಣಮ್ಮ ಈಕೆ ಯಾವುದೇ ದಾಖಲೆಗಳಿಗೆ ಸಹಿ ಮಾಡುವುದನ್ನು ನಾನು ನೋಡಿರುವುದಿಲ್ಲ.

ನಾನು ಆಕೆಯ ಸಹಿಯುನ್ನು ನೋಡದೇ ಖರೀದಿ ಪತ್ರಗಳನ್ನು ಸೃಷ್ಟಿಸಿರುವರು ಎಂದು ಅಪಿಡವಿಟಿನಲ್ಲಿ ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ಸಿದ್ದಮ್ಮಳು ಈ ದಾವೆಯನ್ನು ಯಾವ ಕಾರಣಕ್ಕಾಗಿ ಸಲ್ಲಿಸಿರುವರು ಎಂದು ನನಗೆ ಗೊತ್ತಿಲ್ಲ. ಶಾವಮ್ಮ ತನ್ನ ಸ್ವಂತ ಉಪಯೋಗಕ್ಕೆ ಒಂದು ಜಮೀನನ್ನು ಇಟ್ಟುಕೊಂಡಿರುವರು ಎಂದು ನಾನು ಹೇಳಿದ್ದು ನನಗೆ ಅದರಸ ರ್ವೆ ನಂಬರು ಮತ್ತು ಯಾವ ಗ್ರಾಮದಲ್ಲಿ ಇರುವುದು ಎಂದು ನನಗೆಗ ೊತ್ತಿಲ್ಲ, ನಾನು ಆ ಹೊಲವನ್ನು ನೋಡಿರುವುದಿಲ್ಲ ಅಂದರೆ ಸರಿಯಲ್ಲ. ಆ ಜಮೀನನ್ನು ರೇವಣಸಿದ್ದಪ್ಪ ಇವರು ಸಾಗುವಳಿ ಮಾಡುತ್ತಿರುವರು. ಪ್ರಮಾಣ ಪತ್ರದಲ್ಲಿ ಇನ್ನೊಂದು ಜಮೀನನ್ನು ಶಾವಮ್ಮ ಸ್ವಂತಕ್ಕೆ ನೊಡಿಕೊಂಡಿದ್ದಾರೆ ಎಂದು ಬರೆಸಿದ್ದು ಸದರಿ ಜಮೀನಿನ ಸರ್ವೆ ನಂಬರು ಮತ್ತು ಸದರಿ ಜಮೀನು ಇರುವ ಗ್ರಾಮದ ಹೆಸರು ನನಗೆ ಗೊತ್ತಿರುವುದಿಲ್ಲ. ಸದರಿ ಇನ್ನೊಂದು ಜಮೀನಿನನ್ನು ಬಹಳ ವರ್ಷಗಳ ಹಿಂದೆ ಕರಿಬಸವರಾಜ ಇವರಿಗೆ ಮಾರಾಟ ಮಾಡಿರುವರು ಅಂದರೆ ನನಗೆ ಗೊತ್ತಿಲ್ಲ.

ಶಾವಮ್ಮಳು ದಾವಾ ಅಸ್ತಿಯ ಮಾಲೀಕರು ಅಲ್ಲ ಮತ್ತು ಸ್ವಾದೀನ ಅನುಭವ ಹೊಂದಿರುವುದಿಲ್ಲ ಅಂದರೆ ಸರಿಯಲ್ಲ. ಆಫಿಡವಿಟಿನಲ್ಲಿ ಹಲವಾರು ಪತ್ರಗಳನ್ನು ಸೃಷ್ಟಿಸಿರುವರು ಎಂದು ಹೇಳಿದ್ದು ಅವು ಯಾವ ದಾಖಲೆಗಳು ಎಂದುನ ನಗೆ ಗೊತ್ತಿರುವುದಿಲ್ಲ. ಶಾಮ್ಮಳಿಗೆ ಜೀವನ ನಡೆಸಲು ಯಾವ ಅದಾಯ ಇದೆ ಎಂದು ನನಗೆ ಗೊತ್ತಿಲ್ಲ. ಬೆಳೆ ಬೆಳೆದು ಅದರಿಂದ ಬಂದ ಹಣದಲ್ಲಿ ರೂ 10 ಸಾವಿರವನ್ನು ಸಿದ್ದಮಳ

ಶಾವಮ್ಮಳಿಗೆ ನೀಡುತ್ತಿದ್ದಳು. ಕಳೆದ 7-8 ವರ್ಷಗಳಿಂದ ಆ ಹಣ ಕೊಡುತ್ತಿದ್ದರು. ಸಿದವ್ದುಮ್ಮ ಶಾವಮ್ಮಳಿಗೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ಶಾವಮ್ಮಮ ಸ್ಸು ಸುಬಾಷ ಚಂದ್ರ ಸಾಲವನ್ನು ತೀರುಸುವ ಸಲುವಾಗಿ 4ನೇ ಪ್ರತಿವಾದಿಗೆ ಕ್ರಯ ಪತ್ರ ಬರೆದುಕೊಟ್ಟಿರುವರು ಅಂದರೆ ನನಗೆ ಗೊತ್ತಿಲ್ಲ. ನಾನು ಯಾವುದೇ ಕ್ರಯ ಪತ್ರವನುನ ನೋಡಿರುವುದಿಲ್ಲ, ನಾನು ಯಾವುದೇ ಕಾಗದ ಪತ್ರಗಳನ್ನು ನೋಡದೇ ಇದ್ದರೂ ಕೂಡ ಸೃಷ್ಟಿಸಿರುವರು ಎಂದು ಸಾಕ್ಷಿ ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ.

ಸಿದ್ದಮ್ಮ ಹಾಗೂ ನಾನು ಬಹಳ ವರ್ಷಗಳಿಂದ ವಿಶ್ವಾಸಿ ಆಗಿರುತ್ತನೆ. ನ್ಯಾಯಾಲಯಕ್ಕೆ ನನ್ನನ್ನು ಸಿದ್ದಮ್ಮ ಕರೆದುಕೊಂಡು ಬಂದಿರುವರು ಅಂದರೆ ಸರಿ. ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಲು ಸಿದ್ದಮ್ಮ ಮಾಹಿತಿ ನೀಡಿರುವರು ಅಂದರೆ ಸರಿ. ಸಿದ್ದಮ್ಮಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**1 ನೇ ಪ್ರತಿವಾದಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದರು.**

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ವಕೀಲರಿಂದ**

ನನಗೆ ತಿಳುವಳಿಕೆ ಬಂದಾಗನಿಂದ 2 ಸಲ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದೇನೆ. ಯಾರಾದರು ಕರೆದರೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಅವರು ಕರೆದರೆ ಅವರ ಪರವಾಗಿ ಸಾಕ್ಷಿ ಹೇಳುವುದು ನನಗೆ ಹವ್ಯಾಸವಾಗಿದೆ ಅಂದರೆ ಸರಿಯಲ್ಲ. ನಾನು ಹಲವಾರು ಕೇಸುಗಳಲ್ಲಿ ಸಾಕ್ಷಿ ನುಡಿದಿದ್ದು ಕೇವಲ 2 ಕೇಸುಗಳಲ್ಲಿ ಸಾಕ್ಷಿ ನುಡಿದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಸಿದ್ದಮ್ಮ ಹಾಗೂ ಆಕೆಯ ಯಾವ ಅಸ್ತಿಗೆ ಸಂಬಂದಿಸಿದಂತೆ ಈ ದಾವೆ ಹಾಕಿರುವರು ಎಂದು ನನಗೆ ಗೊತ್ತಿಲ್ಲ. ಸುಬಾಷ ಚಂದ್ರನು ಸಿದ್ದಮ್ಮಳನ್ನು ವಿವಾಹವಾದಾಗ ಆಕೆ ನೌಕರಿಯಲ್ಲಿ ಇದ್ದಳು ಅಂದರೆ ಸರಿ. ಸುಬಾಷ ಚಂದ್ರನು ಜೀವಿತ ಅವದಿಯಲ್ಲಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಅಂದರೆ ಸರಿಯಲ್ಲ. ಆತ ಬಸ್ಸು ಮ್ಯಾನೇಜ ಮೆಂಟು ಮಾಡುತ್ತಿದ್ದನು. ವಿವಾಹವಾದ ನಂತರ ಸುಬಾಷ ಚಂದ್ರನ್ನು ಬಸ್ಸನ್ನು ಖರೀದಿ ಮಾಡಿದ್ದರು ಅಂದರೆ ಸರಿ. ಬಸ್ಸು ಖರೀದಿ ಮಾಡಲು ಸಿದ್ದಮ್ಮ ಹಾಗೂ ಸುಬಾಷ ಚಂದ್ರ ಏನೇನು ವ್ಯವಹಾರ ಮಾಡದ್ದರು ನನಗೆ ಗೊತ್ತಿಲ್ಲ. ಸಿದ್ದಮ್ಮಳು ಬಸ್ಸು ಖರೀದಿ ಮಾಡಲು ಹಲವಾರು ಜನರ ಬಳಿ ಸಾಲ ಪಡೆದ್ದರು ಅಂದರೆನ ನಗೆ ಗೊತ್ತಿಲ್ಲ.

ಸುಬಾಷ ಚಂದ್ರ ಹಾಗೂ ಸಿದ್ದಮ್ಮ ಅನ್ಯೂನ್ಯವಾಗಿದ್ದರು ಅಂದರೆ ಸರಿ. ಆತನಿಗೆ ಹಲವಾರು ವರ್ಷಗಳಿಂದ ಸಕ್ಕರೆ ಕಾಯಿಲೆ ಇತ್ತು ಅಂದರೆ ಸರಿ. ಆತ ಎಲ್ಲಿ ಮೃತ ಪಟ್ಟನು ಎಂದು ನನಗೆ ಗೊತ್ತಿಲ್ಲ. ಅವರು ಲಿವರ್ ಡ್ಯಾಮ್ಯಾಜ್ ಆಗಿ ಮೃತ ಪಟ್ಟರು ಅಂದರೆ ನನಗೆ ಗೊತ್ತಿಲ್ಲ. ಆ ಬಸ್ಸು ಕೆರೆಗೆ ಬಿದ್ದು ಅಪಘಾತವಾಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಬಸ್ಸಿನಲ್ಲಿ ಗಾಯಗೊಂಡವಿಗೆ ಪರಿಹಾರವನ್ನು ಕೊಡಲು ಸಿದ್ದಮ್ಮ ಹಾಗೂ ಸುಬಷ ಚಂದ್ರ ಸಾಲ ಮಾಡಿದ್ದರು ಅಂದರೆ ನನಗೆ ಗೊತ್ತಿಲ್ಲ.

1 ನೇ ದಾವಾ ಅಸ್ತಿಗೆ ಸಂಬಂದಿಸಿದಂತೆ ಸುಬಾಷ ಚಂದ್ರ ಹಾಗೂ ಸಿದ್ದಮ್ಮ ಏನೇನು ವ್ಯವಹಾರ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ಈ ವರೆಗೆ ತಿಳಿದುಕೊಂಡಿರುವುದಿಲ್ಲ. ಸುಬಾಷ ಚಂದ್ರನಿಗೆ ಯಾವ ರೀತಿಯ ದುಷ್ಟಟಗಳು ಇದ್ದವು ಎಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ. ಸುಬಾಷ ಚಂದ್ರನು ಯಾರ ಯಾರ ಬಳಿ ಮತ್ತು ಎಷ್ಟು ಎಷ್ಟು ಸಾಲ ಪಡೆದಿದ್ದನು ಎಂದು ನನಗೆ ಗೊತ್ತಿಲ್ಲ ಅಂದರೆ ಇಬ್ಬರಿಂದ ಪಡೆದಿರುವುದು ಗೊತ್ತಿರುತ್ತದೆ. ಅವರೆಂದಗೆ ಲೋಕಪ್ಪ ಮತ್ತು ಇನ್ನೊಬ್ಬರ ಹೆಸರು ನೆನಪಿರುವುದಿಲ್ಲ. ಸೊಕ್ಕೆ ಗ್ರಾಮವು ಸಿದ್ದಮಳ ಸ್ವಂತ ಊರಾಗಿರುವುದು. ಸಾಲವನ್ನು ತೀರಿಸಲು ಸಿದ್ದಮ್ಮ ಮತ್ತು ಸುಬಾಷ ಚಂದ್ರ 1 ನೇ ದಾವಾ ಅಸ್ತಿಗೆ ಸಂಬಂದಿಸಿದಂತೆ

ಕರಿಬಸ್ಸಮ್ಮ ಚಿಲ್ಲಿ ಇವರ ಹೆಸರಿಗೆ ಖರೀದಿ ಕರಾರನ್ನು ಬರೆದುಕೊಟ್ಟಿದ್ದರು ಅಂದರೆ ನನಗೆ ಗೊತ್ತಿಲ್ಲ.

ಸದರಿ ಕರಿಬಸ್ಸಮ್ಮಳ ಬಳಿ ಹಾಗೂ ಇತರರ ಬಳಿ ಮಾಡಿದ್ದ ಸಾಲವನ್ನು ತಿಳಿರಿಸಲು 1 ನೇ ದಾವಾ ಅಸ್ತಿಯನ್ನು 3 ನೇ ಪ್ರತಿವಾದಿಗೆ ಸಿದ್ದಮ್ಮ ಮತ್ತು ಸುಬಾಷ ಚಂದ್ರ ಮಾರಾಟ ಮಾಡಿರುವರು ಅಂದರೆ ಸರಿಯಲ್ಲ. ಖರೀದಿ ಮಾಡಿದ ದಿನದಿಂದ 3 ನೇ ಪ್ರತಿವಾದಿ 1 ನೇ ದಾವಾ ಅಸ್ತಿಯನ್ನು ಬಿತ್ತುವುದು ಬೆಳೆಯುವುದು ಮಾಡುತ್ತಿರುವರು ಅಂದರೆ ಸರಿಯಲ್ಲ. ದಾವಾ ಅಸ್ತಿಯನ್ನು ರೇವಣಸಿದ್ದಪ್ಪನು ಸಾಗುವಳಿ ಮಾಡುತ್ತಿರುವರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1 ನೇ ದಾವಾ ಅಸ್ತಿ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ಅದು 3 ನೇ ಪ್ರತಿವಾದಿಯ ಹೆಸರಿನಲ್ಲ ಖರೀದಿ ಅಧಾರದ ಮೇಲೆ ಇರುವುದು ಅಂದರೆ ನನಗೆ ಗೊತ್ತಿಲ್ಲ.

ಕಳೆದ 8-10 ವರ್ಷಗಳಿಂದ ಸಿದ್ದಮ್ಮ ನನ್ನ ವಿಶ್ವಾಸಿಗರಾಗಿರುವರು. ಆ ಕಾರಣ ನನಗೆ ದಾವಾ ಅಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹಿತ ಆಕೆಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

12-09-2025

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**